ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಸಭಾಪತಿ ಕರ್ನಾಟಕ ವಿಧಾನ ಪರಿಷತ್

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ      ದಿನಾಂಕ : DATE : 21-12-2020

# ಮನೆ ಖಾಲಿ, ಕಾರು ವಾಪಸ್

21-12-20

**ಬೆಂಗಳೂರು:** ವಿಧಾನಪರಿಷತ್ ಬೆಳವಣಿಗೆಯಿಂದ ನೊಂದಿರುವ ಸಭಾಪತಿ ಪ್ರತಾಪಚಂದ್ರ ಶೆಟ್ಟಿ, ತಮಗೆ ಸರ್ಕಾರ ನೀಡಿದ್ದ ಮನೆಯನ್ನು ಖಾಲಿ ಮಾಡಿದ್ದು, ಕಾರು ಹಿಂತಿರುಗಿಸಿದ್ದಾರೆ. ಕಳೆದ 6 ತಿಂಗಳ ಹಿಂದೆಯಷ್ಟೇ ಸಭಾಪತಿ ಕ್ವಾಟ್ರಸ್ ಪಡೆದುಕೊಂಡಿದ್ದರು. ಈಗ ನನಗೆ, ಕಾರು, ಮನೆ ಯಾವುದೂ ಬೇಕಿಲ್ಲ. ಗೌರವ ಮುಖ್ಯ ಎಂದು ಆಪ್ತ ಸಿಬ್ಬಂದಿಗೆ ಹೇಳಿದರೆಂದು ತಿಳಿದುಬಂದಿದೆ. ತಮಗೆ ಸದನದಲ್ಲಿ ಬಹುಮತವಿಲ್ಲದ ಮೇಲೆ ಅಲ್ಲಿ ಮುಂದುವರಿಯುವುದು ಮನಸಿಗೂ ಕಿರಿಕಿರಿ ಆಗುತ್ತದೆ. ಅತ್ತ ಕೆಟ್ಟ ರಾಜಕೀಯ ಬೆಳವಣಿಗೆ, ಇತ್ತ ಪಕ್ಷದ ನಿಲುವು ಎರಡರ ಮಧ್ಯೆ ಹೈರಾಣಾಗಿ ಹೋಗಿದ್ದೇನೆ ಎಂದು ಆಪ್ತರ ಬಳಿ ಬೇಸರಿಸಿಕೊಂಡಿದ್ದಾರೆ ಎಂದು ಮೂಲಗಳು ಖಚಿತಪಡಿಸಿವೆ.



**ಸಮಯ ಬೇಕೆಂದ ಕಾರ್ಯದರ್ಶಿ:** ಮೇಲ್ಮನೆಯಲ್ಲಿ ನಡೆದ ಘಟನಾವಳಿಗಳ ಹಿನ್ನೆಲೆಯಲ್ಲಿ 24 ಗಂಟೆಯೊಳಗೆ ಉತ್ತರ ನೀಡಬೇಕು ಎಂದು ಸಭಾಪತಿ ನೀಡಿರುವ ನೋಟೀಸ್‌ಗೆ ಪರಿಷತ್ ಕಾರ್ಯದರ್ಶಿ ಮಹಾಲಕ್ಷ್ಮಿ ಇನ್ನೂ ಉತ್ತರಿಸಿಲ್ಲ; ಬದಲಿಗೆ ಡಿ.22 ತನಕ ಕಾಲಾವಕಾಶ ಬೇಕಾಗಿದೆ ಎಂದು ಲಿಖಿತವಾಗಿ ಸಭಾಪತಿಗೆ ಪತ್ರ ಬರೆದು ಕೇಳಿಕೊಂಡಿದ್ದಾರೆ.